# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಮಹಾರಾಷ್ಟ್ರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಪುಣೆಯಲ್ಲಿರುವ ಸಿಂಬಯೋಸಿಸ್ ವಿಶ್ವವಿದ್ಯಾನಿಲಯ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮೂಸಿಯಂ ಮತ್ತು ಸ್ಮಾರಕಕ್ಕೆ ಭೇಟಿ ನೀಡಿದರು.


ಸಂಪುಟ : 45 ಸಂಚಿಕೆ : 24 ಶೋಭಕೃತ್–ಕ್ರೋಧಿ ಫಾಲ್ಗುಣ–ಚೈತ್ರ ಕಲಿಯುಗಾಬ್ದ 5126 – 5127 15–04–2024 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು:4


## ಮತದಾನ – ನಮ್ಮ ರಾಷ್ಟ್ರೀಯ ಕರ್ತವ್ಯ


ಭಾರತ ತನ್ನ 18ನೇ ಲೋಕಸಭೆ ಚುನಾವಣೆಯ ಪರ್ವ ಕಾಲಕ್ಕೆ ಸಿದ್ಧವಾಗುತ್ತಿದೆ. ಏಪ್ರಿಲ್ 19ರಿಂದ ಜೂನ್ 1 ರವರೆಗೆ 7 ಹಂತಗಳಲ್ಲಿ ಈ ಪ್ರಜಾಪ್ರಭುತ್ವದ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ದೇಶ ಸನ್ನದ್ಧವಾಗುತ್ತಿದೆ. ಭಾರತದ ಲೋಕಸಭೆ ಚುನಾವಣೆ ತನ್ನ ಪಾರದರ್ಶಕತೆ ಮತ್ತು ವ್ಯವಸ್ಥಿತ ಮತದಾನದ ಪ್ರಕ್ರಿಯೆಯ ಕಾರಣಕ್ಕಾಗಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಿತ ಚುನಾವಣೆಯ ಮಾನ್ಯತೆಯನ್ನು ಪಡೆದಿದೆ. ವಿಶ್ವದ ಜನರೂ ಭಾರತದ ಚುನಾವಣೆಯನ್ನು ಕುತೂಹಲದಿಂದ ಗಮನಿಸುತ್ತಿರುವ ಈ ಸಂದರ್ಭದಲ್ಲಿ ಈ ರಾಷ್ಟ್ರದ ಪ್ರಜೆಗಳಾಗಿ ನಮ್ಮ ಮತದಾನವನ್ನು ತಪ್ಪದೇ ಮಾಡುವುದು ರಾಷ್ಟ್ರೀಯ ಕರ್ತವ್ಯವಾಗಿದೆ. ಸಮರ್ಥ ಜನಪ್ರತಿನಿಧಿಗಳನ್ನು ಆರಿಸುವ ಮೂಲಕ ರಾಷ್ಟ್ರವನ್ನು ಸದೃಢಗೊಳಿಸುವ ಶಕ್ತಿ ನಮ್ಮ ಮತದಾನಕ್ಕೆ ಇದೆ ಎನ್ನುವುದನ್ನು ಅರಿತು ಕರ್ತವ್ಯವನ್ನು ನಿಭಾಯಿಸಬೇಕಿದೆ.

**ಪ್ರಬುದ್ಧ ಪ್ರಜಾಪ್ರಭುತ್ವ:** ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಮತದಾನದ ಹಕ್ಕಿನಲ್ಲೂ ತಾರತಮ್ಯಗಳಿದ್ದದ್ದನ್ನು ನಾವು ಕಂಡಿದ್ದೇವೆ. ಇತ್ತೀಚೆಗಿನ ದಿನಗಳವರೆಗೂ ಮತ್ತು ಇಂದಿಗೂ ಅನೇಕ ರಾಷ್ಟ್ರಗಳಲ್ಲಿ ಮಹಿಳೆಯರ ಹಕ್ಕುಗಳಿಗೆ ತಕ್ಕ ಸ್ಥಾನಮಾನವನ್ನು ನೀಡಿಲ್ಲ ಎನ್ನುವುದು ವಾಸ್ತವದ ಸಂಗತಿ. ಆದರೆ ಭಾರತದಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡ ದಿನದಿಂದಲೇ ಮತದಾನದ ಹಕ್ಕನ್ನು ಲಿಂಗ, ಜಾತಿ, ಮತ, ಧರ್ಮ ಬೇಧವಿಲ್ಲದೇ ಚಲಾಯಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು ಈ ನೆಲದ ಸಂಸ್ಕೃತಿಯನ್ನು ಮತ್ತು ಭಾರತೀಯ ಸಂವಿಧಾನ ಕರ್ತೃಗಳಿಗಿದ್ದ ಪ್ರಬುದ್ಧತೆಯನ್ನು ಸಾರುತ್ತದೆ.

**ಹೊಸಮತದಾರರೇ ನಿರ್ಣಾಯಕರು:** ಈ ವರ್ಷದ ಚುನಾವಣೆಯಲ್ಲಿ ಮೊದಲ ಬಾರಿಗೆ ತಮ್ಮ ಮತವನ್ನು ಚಲಾಯಿಸುವ 18–19 ವರ್ಷದ ಯುವಕರ ಸಂಖ್ಯೆ 1.85 ಕೋಟಿ. 2019ರಲ್ಲಿ ಈ ಸಂಖ್ಯೆ 1.5 ಕೋಟಿ ಇತ್ತು. ಪ್ರತಿ ಚುನಾವಣೆಯಲ್ಲೂ ಹೊಸಮತದಾರರ ಒಲವು ಯಾವ ಪಕ್ಷದ ಕಡೆಗಿರುತ್ತದೆಯೋ ಆ ಪಕ್ಷ ಸಹಜವಾಗಿ ಅನೇಕ ಕ್ಷೇತ್ರಗಳಲ್ಲಿ ಜಯಗಳಿಸುತ್ತದೆ. ಯುವಜನತೆಯ ಸ್ಪಂದನೆ ರಾಷ್ಟ್ರದ ಸ್ಪಂದನೆಯೂ ಆಗಿರುವುದರಿಂದ ಯುವಕರನ್ನು ಸೆಳೆಯುವ ಪ್ರಯತ್ನ ಸಹಜವಾಗಿಯೇ ಎಲ್ಲಾ ಪಕ್ಷಗಳು ಮಾಡುತ್ತವೆ. ಆದರೆ ಮತದಾನ ಮಾಡುವ ಪ್ರತಿ ಯುವಕ ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮತದಾನ ಮಾಡುವಂತಾಗಬೇಕು. ರಾಷ್ಟ್ರದ ಏಕತೆ, ಸಾರ್ವಭೌಮತೆ ಮತ್ತು ಸುಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಹಕ್ಕನ್ನು ಚಲಾಯಿಸುವಂತಾಗಬೇಕು.

**ಆಮಿಷಗಳಿಗೆ ಬಲಿಯಾಗದೆ ರಾಷ್ಟ್ರವನ್ನು ಬಲಪಡಿಸೋಣ:** ಚುನಾವಣೆಯ ಸಂದರ್ಭದಲ್ಲಿ ಜನಪ್ರತಿನಿಧಿಗಳು, ಪಕ್ಷಗಳು ಹಾಗೂ ಅವರ ಬೆಂಬಲಿಗರಿಂದ ಹಲವು ಆಮಿಷಗಳು ಬರುವುದು ಸಹಜ. ಅದು ಹಣದ ರೂಪದಲ್ಲಾಗಲಿ, ದಿನಸಿ, ವಸ್ತ್ರಗಳನ್ನು ಹಂಚುವುದಾಗಲಿ ಅಥವಾ ಇನ್ನಿತರ ಯಾವುದೇ ರೀತಿಯಲ್ಲಿ ಇರಬಹುದು. ಅಧಿಕಾರವನ್ನು ಗಳಿಸುವ ದೃಷ್ಟಿಯಿಂದ ರಾಷ್ಟ್ರದ ಅರ್ಥವ್ಯವಸ್ಥೆಯನ್ನು ಕುಗ್ಗಿಸುವಂತಹ ಯೋಜನೆಗಳೂ ಪ್ರಣಾಳಿಕೆಗಳಲ್ಲಿ ಬರಬಹುದು. ಆದರೆ ಅಂತಹ ಸಂದರ್ಭದಲ್ಲಿ ಮತದಾನವನ್ನು ನಮ್ಮ ರಾಷ್ಟ್ರೀಯ ಕರ್ತವ್ಯವೆಂದು ಅರಿತು, ನಮ್ಮ ಮತ ಮಾರಾಟಕ್ಕಲ್ಲ ಎಂಬ ಜಾಗೃತಿಯಿಂದ ಮತದಾನವನ್ನು ಮಾಡುವಂತಾಗಬೇಕು. ನಾವು ಜಾಗೃತರಾಗುವುದರ ಜೊತೆಗೆ, ಇತರರಲ್ಲೂ ರಾಷ್ಟ್ರದ ಕಲ್ಯಾಣದ ಕುರಿತು ಜಾಗೃತಿಯನ್ನು ಮೂಡಿಸಬೇಕು.


**ನೋಟಾ ಬೇಡ:** ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮ ಜನಪ್ರತಿನಿಧಿಯಾಗಲು ಶೇ.100ರಷ್ಟು ಅರ್ಹತೆ ಇರುವ ಒಳ್ಳೆಯ ಅಭ್ಯರ್ಥಿ ಕೆಲವೊಮ್ಮೆ ಸಿಗದೇ ಇರಬಹುದು. ಪ್ರಜಾತಂತ್ರದ ವ್ಯವಸ್ಥೆಯ ವೈಶಿಷ್ಟ್ಯವೇ ಇರುವವರಲ್ಲಿ ಉತ್ತಮರ ಆಯ್ಕೆಯನ್ನು ಮಾಡುವುದಾಗಿದೆ. ಲಭ್ಯವಿರುವ ಉತ್ತಮ (ಅವೈಲೆಬಲ್ ಬೆಸ್ಟ್)ರನ್ನು ನಾವು ಆಯ್ಕೆ ಮಾಡಿ ನಮ್ಮ ಜನಪ್ರತಿನಿಧಿಯನ್ನು ಆರಿಸಬೇಕು. ನಾವು ಬಯಸಿದಂತೆ ಅಭ್ಯರ್ಥಿಗಳಿಲ್ಲ ಎಂದು ನೋಟಾ ಒತ್ತಿದರೆ, ಇರುವ ಒಳ್ಳೆಯ ಅಭ್ಯರ್ಥಿಯನ್ನು ನಾವು ಕಳೆದುಕೊಳ್ಳುತ್ತೇವೆ ಮತ್ತು ನಮ್ಮ ಈ ಕಾರ್ಯದ ಲಾಭವನ್ನು ಲಭ್ಯವಿರುವ ಕಳಪೆ (ಅವೈಲೆಬಲ್ ವರ್ಸ್ಟ್) ಅಭ್ಯರ್ಥಿಗಳು ಪಡೆದುಕೊಳ್ಳುತ್ತಾರೆ.



### ಮತದಾನದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ

ಸಂವಿಧಾನದತ್ತವಾಗಿ ಬಂದಿರುವ ಹಕ್ಕನ್ನು ಮತ್ತು ರಾಷ್ಟ್ರೀಯ ಕರ್ತವ್ಯವನ್ನು ಮಹಿಳೆಯರು ಬಳಸಿಕೊಳ್ಳುವ ಪ್ರಮೇಯ ಚುನಾವಣೆಯಿಂದ ಚುನಾವಣೆಗೆ ಹೆಚ್ಚಾಗುತ್ತಿರುವುದು ಆಶಾದಾಯಕ ಬೆಳವಣಿಗೆ. ಅಂಕಿಅಂಶಗಳನ್ನು ಗಮನಿಸುವುದಾದರೆ 1951ರ ಚುನಾವಣೆಯಲ್ಲಿ 8 ಕೋಟಿ ಜನ ಮಾತ್ರ ಮತ ಚಲಾಯಿಸಿದ್ದರು. 2009ರ ಚುನಾವಣೆಯಲ್ಲಿ ಇದು 42 ಕೋಟಿಯಷ್ಟಿತ್ತು, ಅದರಲ್ಲಿ 19 ಕೋಟಿ ಮಹಿಳೆಯರು. 2014ರಲ್ಲಿ, ಮತದಾನದ ಪ್ರಮಾಣವು 55 ಕೋಟಿಗೆ ಏರಿತು, ಅದರಲ್ಲಿ 26 ಕೋಟಿ ಮಹಿಳೆಯರು ಮತದಾನ ಮಾಡಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲಿರುವ ಒಟ್ಟು ಮತದಾರರ ಸಂಖ್ಯೆ 96.88 ಕೋಟಿ. ಇದರಲ್ಲಿ 47.1 ಕೋಟಿ ಮಹಿಳೆಯರು, 49.7 ಕೋಟಿ ಪುರುಷರು. 2019ರಲ್ಲಿ ಈ ಸಂಖ್ಯೆ ಕ್ರಮವಾಗಿ 43.1 ಕೋಟಿ ಮತ್ತು 46.5 ಕೋಟಿ ಆಗಿತ್ತು. 2019ರಲ್ಲಿ ಮತದಾನ ಮಾಡುವ ಪ್ರತಿ ಸಾವಿರ ಪುರುಷರಿಗೆ ಮಹಿಳಾ ಮತದಾರರ ಸರಾಸರಿ ಸಂಖ್ಯೆ 928 ಇತ್ತು. ಅದು 2024ಕ್ಕಾಗುವಾಗ 948ಕ್ಕೆ ಏರಿಕೆಯಾಗಿದೆ. 2047ರಲ್ಲಿ ಮಹಿಳೆಯರ ಮತದಾನದ ಪ್ರಮಾಣವು 55% ಕ್ಕೆ ಹೆಚ್ಚಾಗಬಹುದು ಮತ್ತು ಪುರುಷರ ಮತದಾನದ ಪ್ರಮಾಣವು 45% ಕ್ಕೆ ಇಳಿಯಬಹುದು ಎಂದು ವರದಿಗಳು ತಿಳಿಸಿವೆ. ಮುಂದಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯದ ರಾಜಕಾರಣದಲ್ಲೂ ಮಹಿಳಾ ಸಹಭಾಗಿತ್ವ ಶೇ.33 ಕಡ್ಡಾಯವಾಗುವುದರಿಂದ ತಮ್ಮ ಪ್ರತಿನಿಧಿತ್ವವನ್ನು ಬಹಳ ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಆತ್ಮವಿಶ್ವಾಸ ದೊರೆತಂತಾಗಿದೆ. ತಮ್ಮ ಪ್ರತಿನಿಧಿತ್ವವನ್ನು ಜವಾಬ್ದಾರಿಯುತವಾಗಿ ನಿಭಾಯಿಸಬೇಕಿದೆ.

**100% ಮತದಾನದಿಂದ ಸುಭದ್ರ ರಾಷ್ಟ್ರನಿರ್ಮಾಣ:** ಮತದಾನದ ಮೂಲಕ ರಾಷ್ಟ್ರ ಮತ್ತು ರಾಜ್ಯಕ್ಕೆ ಜನಪ್ರತಿನಿಧಿಗಳನ್ನು ಚುನಾಯಿಸುವ ಮೂಲಕ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ನಾವೂ ಕೈಜೋಡಿಸುವುದಕ್ಕಾಗುತ್ತದೆ. ಅಂತಹ ಅತ್ಯಂತ ಮಹತ್ವಪೂರ್ಣ ಜವಾಬ್ದಾರಿ ನಮ್ಮ ಕೈಯಲ್ಲಿದೆ. ಆದರೆ ಅನೇಕ ಚುನಾವಣೆಗಳ ಅಂಕಿ





ಅಂಶಗಳನ್ನು ಗಮನಿಸಿದರೆ ಹಲವಾರು ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಶೇ.50ಕ್ಕಿಂತಲೂ ಕಡಿಮೆ ಇರುವುದು ತಿಳಿದು ಬರುತ್ತದೆ. ಅದರಲ್ಲೂ ನಗರ ಪ್ರದೇಶಗಳಲ್ಲಿ ಮತದಾನದ ಕುರಿತು ನಿರಾಸಕ್ತಿ ಹೆಚ್ಚಿರುವುದನ್ನು ಅಂಕಿಅಂಶಗಳು ತಿಳಿಸುತ್ತವೆ. ಇದರಿಂದ ನಾವು ನಮ್ಮ ಜವಾಬ್ದಾರಿಯನ್ನು ಮರೆತು, ಪ್ರಶ್ನಿಸುವ ನೈತಿಕ ಹಕ್ಕನ್ನು ಕಳೆದುಕೊಂಡು ಅಭಿವೃದ್ಧಿ ಕುಂಟಿತವಾಗುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ನಮ್ಮ ಮತದಾನಕ್ಕಿರುವ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡು ಸದೃಢ ಸಮಾಜವನ್ನು ಕಟ್ಟಲು ನಾವು ತಪ್ಪದೆ ಮತದಾನ ಮಾಡೋಣ. ಮತದಾನ ಮಾಡಿದವರಿಗೆ ಮಾತ್ರ ವ್ಯವಸ್ಥೆಯನ್ನು ಪ್ರಶ್ನಿಸುವ ನೈತಿಕ ಹಕ್ಕಿರುವುದರಿಂದ ನಮ್ಮ ಕರ್ತವ್ಯವನ್ನು ನಿಭಾಯಿಸೋಣ. ಜೊತೆಗೆ ನಮ್ಮ ಮನೆಯ ಮತ್ತು ಸುತ್ತಮುತ್ತಲ ಕುಟುಂಬಗಳಿಗೂ ಮತದಾನದ ಮಹತ್ವವನ್ನು ತಿಳಿಸಿ ಶೇ.100 ರಷ್ಟು ಮತದಾನಕ್ಕಾಗಿ ಶ್ರಮವಹಿಸಿ ಸಮೃದ್ಧ ಸಮಾಜವನ್ನು ನಿರ್ಮಿಸೋಣ.

**ಮತದಾನದ ಕುರಿತು ಇರಲಿ ಧನಾತ್ಮಕ ಆಲೋಚನೆ:** ರಾಜಕೀಯ ಕೆಸರೆರಚಾಟ, ನಂಬಿಕೆ ಉಳಿಸಿಕೊಳ್ಳದ ವ್ಯವಸ್ಥೆ, ಭ್ರಷ್ಟಾಚಾರ, ಜನಸಾಮಾನ್ಯರನ್ನು ತಲುಪದ ಸರ್ಕಾರಿ ನಿಯಮಗಳು, ನೊಂದವರ ಸಹಕಾರಕ್ಕೆ ಬಾರದ ಅಧಿಕಾರಿ ವರ್ಗ, ಮತದಾರರ ಕಡೆಗಣನೆ, ಅಭಿವೃದ್ಧಿಗೆ ಕೊಡದ ಮಾನ್ಯತೆ, ಜಾತಿ ರಾಜಕಾರಣ, ತಾವು ಬಯಸಿದ ಅಭ್ಯರ್ಥಿಗೆ ಅವಕಾಶ ಸಿಗದೇ ಇರುವುದು ಹೀಗೆ ಅನೇಕ ಕಾರಣಗಳಿಗೆ ಮತದಾನ ಪ್ರಕ್ರಿಯೆಯ ಕುರಿತು ನಿರಾಸಕ್ತಿ ಮೂಡಿ, ಮತದಾನ ಬಹಿಷ್ಕಾರದ ನಿರ್ಧಾರಕ್ಕೆ ಅನೇಕರು ಬರುವುದಿದೆ. ಇಂತಹ ಸಂದರ್ಭದಲ್ಲಿ ದೇಶ ಮೊದಲು ಎಂಬ ಭಾವದೊಂದಿಗೆ ಸಮಾಜ ಹಿತಕ್ಕೆ ಸಹಕಾರಿಯಾಗುವ ಮತದಾನ ಪ್ರಕ್ರಿಯೆಯಲ್ಲಿ ನಾವು ಭಾಗವಹಿಸಿ ನಮ್ಮ ಕರ್ತವ್ಯವನ್ನು ನಿಭಾಯಿಸಬೇಕು. ನಮ್ಮ ಒಂದೊಂದು ಮತಕ್ಕೂ ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸುವ ಜನಪ್ರತಿನಿಧಿಯನ್ನು ಚುನಾಯಿಸುವ, ಐದು ವರ್ಷಗಳ ಕಾಲ ಜನಸಾಮಾನ್ಯರ ಸಮಸ್ಯೆಗಳಿಗೆ ಸಂದಿಸುವ ವ್ಯಕ್ತಿಯನ್ನು ಆರಿಸುವ ಬಹುದೊಡ್ಡ ಶಕ್ತಿ ಇದೆ. ಅದೆಲ್ಲದ್ದಕ್ಕಿಂತಲೂ ಹೆಚ್ಚಾಗಿ ನಾವು ಚುನಾಯಿಸಿದ ಅಭ್ಯರ್ಥಿ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದಾದರೆ ಅವನನ್ನು ಪ್ರಶ್ನಿಸುವ ನೈತಿಕ ಹಕ್ಕೂ ನಮಗಿರುತ್ತದೆ. ಅನ್ಯ ಕಾರಣಗಳಿಂದ ನಾವು ಈ ನಮ್ಮ ರಾಷ್ಟ್ರೀಯ ಕರ್ತವ್ಯದಿಂದ ವಿಮುಖರಾಗಬಾರದು. ■

## ಸಂಸ್ಮರಣೆ

# ಗುರುನಾನಕ್

ರತ್ನಪ್ರಸವಿ ತಾಯಿ ಭಾರತಾಂಬೆಯ ಮಡಿಲಲ್ಲಿ ಅಸಂಖ್ಯ ಶ್ರೇಷ್ಠ ಸಂತರುಗಳ ಅವತಾರವಾಗಿದೆ. ತಮ್ಮ ವಿಶಿಷ್ಟ ಚಿಂತನೆಗಳೊಂದಿಗೆ ಅವರು ಮಾನವ ಜನಾಂಗದ ಕಲ್ಪನೆಗಳಿಗೆ ಹೊಸ ದಿಶೆಯನ್ನು ತೋರಿಸಿದ್ದಾರೆ. ಭಾರತ ಕಂಡ ಸಂತ ಪರಂಪರೆಯ ಶ್ರೇಷ್ಠ ಚಿಂತಕರಲ್ಲಿ ಒಬ್ಬರು, ಶೌರ್ಯ, ಸಾಹಸ, ಅಪ್ರತಿಮ ದೇಶಭಕ್ತಿಗೆ ಹೆಸರಾದ ಸಿಖ್ ಪಂಥದ ಸ್ಥಾಪಕರು ಶ್ರೀ ಗುರುನಾನಕ್.



**ಪರಿಚಯ:** ಗುರುನಾನಕ್ 15 ಏಪ್ರಿಲ್ 1469ರಲ್ಲಿ ಪಂಜಾಬಿನ ರಾಯ್ ಬೊಯಿಲಿ ತಾಲ್ವಂಡಿ (ಪ್ರಸ್ತುತ ಪಾಕಿಸ್ಥಾನದ ನಾನ್‌ಕಾನ ಸಾಹೇಬ್) ಎಂಬ ಊರಿನಲ್ಲಿ ಜನಿಸಿದರು. ಇವರ ತಂದೆ ಕಲ್ಯಾಣ ಚಂದ್‌ದಾಸ್ ಬೇಡಿ ತಾಲ್ವಂಡಿಯಲ್ಲಿ ಲೆಕ್ಕಿಗನಾಗಿ ಕಾರ್ಯನಿರ್ವಹಿಸುತ್ತಿದ್ದರು. ತಾಯಿ ಮಾತಾ ತೃಪ್ತಾ. ಗುರುನಾನಕರಿಗೆ ಬಾಲ್ಯದಲ್ಲಿಯೇ ಅಧ್ಯಾತ್ಮದತ್ತ ಅತೀವ ಒಲವು. ಗುರುನಾನಕ್ 16 ವಯಸ್ಸಿಗೆ ತಲುಪುತ್ತಿದ್ದಂತೆ ಇವರ ಸಹೋದರಿ ಸುಲ್ತಾನ್‌ಪುರದಲ್ಲಿ ಕೆಲಸಕ್ಕಾಗಿ ಕಳುಹಿಸುತ್ತಾರೆ. ದೆಹಲಿ ಸುಲ್ತಾನರ ಲೆಕ್ಕಾಚಾರವನ್ನು ಲಾಹೋರ್‌ನಲ್ಲಿ ಗಮನಿಸುವ ಕೆಲಸವನ್ನು ಮಾಡಲು ಪ್ರಾರಂಭಿಸುತ್ತಾರೆ. ಕಾಲಾಂತರದಲ್ಲಿ ಗುರುನಾನಕರ ಮೇಲೆ ವ್ಯವಹಾರದಲ್ಲಿ ಕಳ್ಳತನದ ಆರೋಪವನ್ನು ಹಾಕಲಾಗುತ್ತದೆ. ಇದರಿಂದ ತೀವ್ರವಾಗಿ ನೊಂದ ನಾನಕರು ಲೌಕಿಕ ಜೀವನವನ್ನು ತೊರೆಯಲು ನಿರ್ಧರಿಸುತ್ತಾರೆ. ಇದಕ್ಕಿದ್ದಂತೆ ಒಂದು ದಿನ ಸಂಜೆ ಊರ ಕೆರೆಯ ಬಳಿ ಕಾಣೆಯಾಗುತ್ತಾರೆ. ಗುರುನಾನಕರ ಅಲಭ್ಯತೆಯಿಂದ ಮನೆಯವರಿಗೆ ಗಾಬರಿಯಾಗುತ್ತದೆ. ಆದರೆ ಅಚ್ಚರಿ ಎಂಬಂತೆ ಗುರುನಾನಕರು ಮೂರು ದಿನಗಳ ನಂತರ ಅದೇ ಸ್ಥಳದಲ್ಲಿ ಪ್ರತ್ಯಕ್ಷರಾಗುತ್ತಾರೆ. ಈ ಬಾರಿ ಅವರು ಹಿಂದಿನಂತಿರುವುದಿಲ್ಲ. ನೋಡಲು ತೇಜೋಮಯರಾಗಿ, ದಿವ್ಯದರ್ಶನವನ್ನು ಸಾಕ್ಷಾತ್ಕರಿಸಿದ ವ್ಯಕ್ತಿಯಾಗಿ ನಾನಕರು ತಮ್ಮ ಚಿಂತನೆಗಳನ್ನು ತಿಳಿಸಲು ಮುಂದಾಗುತ್ತಾರೆ.

ನಂತರದ ಕಾಲಘಟ್ಟದಲ್ಲಿ ಸಮಾಜದಲ್ಲಿರುವ ಕಳಂಕಗಳನ್ನು ವಿರೋಧಿಸಿ ಸಮಾನತೆಯ ಸಂದೇಶವನ್ನು ಸಾರುತ್ತಾರೆ. ದೇವರು ಒಬ್ಬನೇ. ಅವನು ನಿರ್ಗುಣ, ನಿರಾಕಾರ. ಆತ ಪ್ರತಿ ವಸ್ತುವಿನಲ್ಲೂ ಇದ್ದಾನೆ ಎಂಬುದನ್ನು ಸಮಾಜಕ್ಕೆ ಬೋಧಿಸುತ್ತಾರೆ. ಇವರ ಬೋಧನೆಗಳಿಗೆ ಆಕರ್ಷಿತರಾಗಿ ಇವರಿಗೆ ಮೊದಲ ಶಿಷ್ಯನಾಗಿ ದೊರೆತದ್ದು ಬಡಗಿ ಲಾಲ. ಮುಂದೆ ಸಂಪೂರ್ಣ ರಾಷ್ಟ್ರದಲ್ಲಿ ಸಂಚರಿಸಿ ತಮ್ಮ ಚಿಂತನೆಯನ್ನು ಹರಡುತ್ತಾರೆ. ಭಾರತ ಮಾತ್ರವಲ್ಲದೆ ದೂರದ ಅರೇಬಿಯಾ, ಸಿರಿಯ, ಟಿಬೆಟ್, ದಕ್ಷಿಣ ಏಷ್ಯಾದ ಪ್ರವಾಸವನ್ನು ಕೈಗೊಳ್ಳುತ್ತಾರೆ. ಇವರ ಬೋಧನೆಗಳಿಗೆ ಆಕರ್ಷಿತರಾಗಿ ವಿಶ್ವದಾದ್ಯಂತ ಇವರ ಶಿಷ್ಯರ ಸಂಖ್ಯೆ ಏರುತ್ತಾ ಹೋಗುತ್ತದೆ. ನಂತರದ ಸಮಯದಲ್ಲಿ ಕರ್ತಾರ್‌ಪುರದಲ್ಲಿ ರೈತನಾಗಿ ನೆಲೆಯೂರಿ ಜಾತಿ, ಧರ್ಮ, ಲಿಂಗವನ್ನು ಮೀರಿದ ಸಾಮೂಹಿಕ ಸಹಭೋಜನವನ್ನು ಪ್ರಾರಂಭಿಸುತ್ತಾರೆ. ಇವರ ಜೀವನದ ಪ್ರತಿ ಹಂತದಲ್ಲೂ ಸಮಾನತೆಯನ್ನು ಸಾರಿದರು. ಹಿಂದುಸ್ತಾನಿ ಭಾಷೆಯಲ್ಲಿ ಕಲಿಯುವುದು ಎನ್ನುವುದಕ್ಕೆ 'ಸೀಕ್' ಎನ್ನುತ್ತಾರೆ. ಇವರ ಬೋಧನೆಗಳನ್ನು ಅರಿಯಲು ಬಂದ ವಿದ್ಯಾರ್ಥಿಗಳು ಮುಂದೆ ಸಿಖ್ಖರಾಗುತ್ತಾರೆ.

ಗುರುನಾನಕರು ಒಬ್ಬ ಶ್ರೇಷ್ಠ ಕವಿಯು ಹೌದು. ಇವರು ತಮ್ಮ ಬೋಧನೆಗಳನ್ನು 974 ಭಜನೆಗಳ ರೂಪದಲ್ಲಿ ಬರೆದಿಟ್ಟಿದ್ದರು. ಇದುವೇ ಮುಂದೆ ಸಿಖ್ಖರ ಪವಿತ್ರ ಗ್ರಂಥ ಗುರುಗ್ರಂಥ ಸಾಹೇಬ್ ಆಗುತ್ತದೆ. ಸಮಾಜದಲ್ಲಿ ಸಮಾನತೆಯ ಜ್ಯೋತಿಯನ್ನು ಬೆಳಗಿಸಲು ಶ್ರಮಿಸಿದ, ಕ್ಷಾತ್ರ ಪರಂಪರೆಗೆ ಹೆಸರುವಾಸಿಯಾಗಿರುವ ಸಿಖ್ ಪಂತವನ್ನು ಸ್ಥಾಪಿಸಿದ ಗುರುನಾನಕ್ 22 ಸೆಪ್ಟೆಂಬರ್ 1539 ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ದೈವಾಧೀನರಾಗುತ್ತಾರೆ.

ಸೇವಾಗಾಥಾ

## ಪುಟ್ಟ ಬಾಲಕಿಯರ ಬದುಕಿಗೆ ಆಶಾಕಿರಣ ವೈದೇಹಿ ಆಶ್ರಮ

ಒಂದು ರಸ್ತೆ ಅಪಘಾತದಲ್ಲಿ ತನ್ನ ತಾಯಿ-ತಂದೆಯರನ್ನು ಕಳೆದುಕೊಂಡು, ಜೊತೆಗೆ ತನ್ನ ಎಡಗಾಲು ಮತ್ತು ಬಲಗೈಯನ್ನು ಕಳೆದುಕೊಂಡು, ಬದುಕನ್ನು ದುಸ್ತರಗೊಳಿಸಿದ ತನ್ನ ಜೀವನದ ಆ ಕ್ಷಣವನ್ನು ಭಾರತಿ ಎಂದೂ ಮರೆಯುವುದಿಲ್ಲ. ಈ ಘಟನೆಯಿಂದಾಗಿ ಮುಂದಿನ ದಾರಿ ತೋಚದೆ ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿದ್ದ ಕೇವಲ ಆರು ವರ್ಷದ ಹಸುಳೆ ಭಾರತಿ ಇಂದು ಬಿಕಾಂ ಪದವಿ ಓದುತ್ತಾ, ಪ್ರತಿಯೊಬ್ಬರಿಗೂ ಪ್ರೇರಣೆಯನ್ನು ನೀಡುತ್ತಿದ್ದಾಳೆ.

ಭಾರತಿಗೆ ಜೀವನದಲ್ಲಿ ಹೊಸದಿಕ್ಕು ಹಾಗೂ ಜೀವನಾಧಾರವನ್ನು ನೀಡುವ ಅವಳ ಪರಿವಾರವೆಂದರೆ ಅದು ಭಾಗ್ಯನಗರದ 'ವೈದೇಹಿ ಆಶ್ರಮ'. ಕೇವಲ ಮೂರು ಹೆಣ್ಣುಮಕ್ಕಳೊಂದಿಗೆ ಪ್ರಾರಂಭವಾದ ವೈದೇಹಿ ಆಶ್ರಮ, ಇಂದು ಅನೇಕ ಅನಾಥ ಮತ್ತು ವಿಷಮ ಪರಿಸ್ಥಿತಿಗಳಿಗೆ ಒಳಗಾದ ಸುಮಾರು 205ಕ್ಕೂ ಅಧಿಕ ಮುಗ್ಧ ಹೆಣ್ಣುಮಕ್ಕಳ ಉತ್ಸಾಹದಾಯಕ ಜೀವನಕ್ಕೆ ಆಧಾರವಾಗಿದೆ.

ಸ್ವರ್ಗೀಯ ಶ್ರೀ ಪಿ ವಿ ದೇಶಮುಖ್ ಅವರ ಮಾರ್ಗದರ್ಶನದಿಂದ ಮಹಿಳೆಯರು ಮತ್ತು ಮಕ್ಕಳ ಸಮಸ್ಯೆಗಳ ಬಗ್ಗೆ ಗಮನಹರಿಸುವ ಸಲುವಾಗಿ ವೈದೇಹಿ ಸೇವಾ ಸಮಿತಿಯು 1993ರಲ್ಲಿ ಭಾಗ್ಯನಗರದಲ್ಲಿ (ಹೈದರಾಬಾದ್)ಸೇವಾಭಾರತಿಯ ಒಂದು ಘಟಕವಾಗಿ ಪ್ರಾರಂಭವಾಯಿತು. 1999ರಲ್ಲಿ ಸಂಘದ ಅಂದಿನ ಅಖಿಲ ಭಾರತೀಯ ಸೇವಾ ಪ್ರಮುಖರಾದ ಸೂರ್ಯನಾರಾಯಣ ರಾವ್ ಅವರು ವೈದೇಹಿ ಸೇವಾ ಸಮಿತಿಯ ಹೊಸ ಕಟ್ಟಡಕ್ಕೆ ಶಿಲಾನ್ಯಾಸವನ್ನು ನೆರವೇರಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು 2005ರಲ್ಲಿ ಈ ಆಶ್ರಮದ ಹೊಸ ಕಟ್ಟಡವನ್ನು ಉದ್ಘಾಟಿಸಿದ್ದರು.

ಈ ಹೆಣ್ಣುಮಕ್ಕಳಿಗೆ ಮನೆಯಂತಾಗಿರುವ ವೈದೇಹಿ ಆಶ್ರಮವು, ತಾಯಿ-ತಂದೆಯರು ಅಥವಾ ಪೋಷಕರು ಇಲ್ಲದಿರುವ ಆರರಿಂದ ಹತ್ತು ವರ್ಷದ ವಯಸ್ಸಿನ ಬಾಲಕಿಯರನ್ನು ಇಲ್ಲಿ ದತ್ತು ಪಡೆಯಲಾಗುತ್ತದೆ. ಆಶ್ರಮವು ತಾಯಿ-ತಂದೆಯರ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುತ್ತ, ಅವರ ಪಾಲನೆ-ಪೋಷಣೆ, ಉನ್ನತ ಶಿಕ್ಷಣ, ಸಂಸ್ಕಾರ, ಜೀವನ ಕೌಶಲ್ಯ ಅಭಿವೃದ್ಧಿ ಮತ್ತು ವ್ಯಕ್ತಿತ್ವ ವಿಕಸನದ ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸುತ್ತಾ, ಸಮಾಜಕ್ಕೆ ಆದರ್ಶ ಮತ್ತು ಸ್ಫೂರ್ತಿದಾಯಕ ವ್ಯಕ್ತಿತ್ವವನ್ನು ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಗುಣಮಟ್ಟದ ಶಿಕ್ಷಣವನ್ನು ಗಟ್ಟಿಗೊಳಿಸುವಲ್ಲಿ ಹತ್ತನೇ ತರಗತಿಯವರೆಗೆ ಎಲ್ಲಾ ಬಾಲಕಿಯರು ಶ್ರೀ ಸರಸ್ವತಿ ಶಿಶುಮಂದಿರದ ಹೈಸ್ಕೂಲಿನಲ್ಲಿ ಅಭ್ಯಸಿಸುತ್ತಾರೆ. ಇಲ್ಲಿ ಈ ಬಾಲಕಿಯರಿಗೆ ಕ್ರೀಡೆಗಳು, ವಿಜ್ಞಾನಮೇಳಗಳು, ಸಾಂಸ್ಕೃತಿಕ ಚಟುವಟಿಕೆ ಇತ್ಯಾದಿಗಳಲ್ಲಿ ಭಾಗವಹಿಸಲು ಉತ್ತೇಜನ ನೀಡಲಾಗುತ್ತದೆ. ಶಿಕ್ಷಣ, ಸಂಸ್ಕಾರ ಮತ್ತು ರಾಷ್ಟ್ರಭಾವವನ್ನು ಜಾಗೃತಗೊಳಿಸುವ ಜೊತೆಗೆ, ಉನ್ನತ ಶಿಕ್ಷಣವು ಪೂರ್ತಿಯಾದ ಮೇಲೆ ವಿವಾಹದ ತನಕ ಸಂಪೂರ್ಣ ಜವಾಬ್ದಾರಿಯನ್ನು ಆಶ್ರಮವೇ ವಹಿಸುತ್ತದೆ. ಇಂದು ಆಶ್ರಮದ 21 ಹೆಣ್ಣುಮಕ್ಕಳು ಸ್ನಾತಕೋತ್ತರ ವಿದ್ಯಾಭ್ಯಾಸ ಮುಗಿಸಿ ಕೆಲಸ ಮಾಡುತ್ತಿದ್ದಾರೆ. 2021ರ ವರೆಗೆ 45 ಹುಡುಗಿಯರ ವಿವಾಹದಲ್ಲಿ ವೈದೇಹಿ ಆಶ್ರಮವು ತಾಯಿ-ತಂದೆಯರ ಸ್ಥಾನದಲ್ಲಿ ನಿಂತು ಕರ್ತವ್ಯವನ್ನು ನಿಭಾಯಿಸಿತು ಮತ್ತು ಈಗಲೂ ಅವರೆಲ್ಲರ ತವರುಮನೆ ಇದೇ ವೈದೇಹಿ ಆಶ್ರಮವೇ ಆಗಿದೆ.

ವೈದೇಹಿ ಆಶ್ರಮವು ಮುಗ್ಧ ಹೆಣ್ಣುಮಕ್ಕಳಿಗೆ ಎಲ್ಲ ಕಲೆಗಳನ್ನು ಕರಗತ ಮಾಡಿಸಿ, ಬುದ್ಧಿಶಕ್ತಿ ಮತ್ತು ಆತ್ಮವಿಶ್ವಾಸವನ್ನು ನೀಡುತ್ತ ಅವರನ್ನು ಗಟ್ಟಿಗೊಳಿಸುತ್ತಿದೆ.



ಎಲ್ಲೋ ಕೇಳಿದ ಕಥೆ

## ಪ್ರೀತಿ ತೋರಿಸುವುದು ಮಾನವೀಯ ಗುಣ


ಒಂದು ನದೀ ತೀರದ ಪ್ರದೇಶ. ಸುತ್ತಮುತ್ತಲ ಪ್ರಕೃತಿ ಅತ್ಯಂತ ರಮಣೀಯವಾಗಿ ಕಾಣಿಸುತ್ತಿತ್ತು. ಅಲ್ಲಿ ಒಂದು ಋಷಿಯ ಆಶ್ರಮವಿತ್ತು. ಅಲ್ಲಿ ವಾಸವಾಗಿದ್ದ ಋಷಿಗಳು ಪ್ರತಿನಿತ್ಯ ಮುಂಜಾನೆ ಎದ್ದು ನದಿಯಲ್ಲಿ ಸ್ನಾನ ಮಾಡಿ ಸಂಧ್ಯಾವಂದನೆ ಮಾಡುತ್ತಿದ್ದರು. ಆಮೇಲೆ ತಪಸ್ಸಿನಲ್ಲಿ ತೊಡಗುತ್ತಿದ್ದರು.

ಹೀಗೇ ಒಂದು ದಿನ ಆ ಋಷಿಗಳು ಸಂಧ್ಯಾವಂದನೆ ಮಾಡಲು ಹೋಗುವ ವೇಳೆಯಲ್ಲಿ ಗಾಯಗೊಂಡ ಚೇಳೊಂದು ಮರದಿಂದ ಜಾರಿ ನದಿಯ ನೀರಿನೊಳಗೆ ಬಿತ್ತು. ಗಾಯಗೊಂಡಿದ್ದರಿಂದಾಗಿ ನೀರಿನಲ್ಲಿ ಮುಳುಗಿ ಮುಳುಗಿ ಮೇಲೇಳುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಅದು ಆಯಾಸದಿಂದ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗುವಂತಿತ್ತು. ಅದನ್ನು ಕಂಡು ಅನುಕಂಪಗೊಂಡ ಋಷಿ ಅದನ್ನು ನೀರಿನಿಂದ ಎತ್ತಿ ದಡದ ಮೇಲೆ ಬಿಡಲು ಮುಂದಾದರು. ಚೇಳನ್ನು ಕೈಯಲ್ಲಿ ಹಿಡಿದು ಮೇಲೆತ್ತಿದ ಕೂಡಲೇ ಅದು ಋಷಿಯ ಕೈಯನ್ನು ಬಲವಾಗಿ ಕಚ್ಚಿತು. ನೋವಿನಿಂದ ಋಷಿ ಕೈಯನ್ನು ಒದರಿದಾಗ ಚೇಳು ಮತ್ತೆ ನೀರಿನೊಳಗೆ ಬಿತ್ತು. ಮತ್ತೆ ಅದು ನೀರಿನಲ್ಲಿ ಮುಳುಗಲು ಪ್ರಾರಂಭಿಸಿತು. ಋಷಿ ಆ ಚೇಳನ್ನು ಸಾವಿನಿಂದ ಪಾರು ಮಾಡಲು ಬಯಸಿದ. ಅದು ಪುನಃ ಕಚ್ಚಿತು. ಈ ರೀತಿ ಹಲವು ಬಾರಿ ನಡೆಯಿತು. ಚೇಳು ತನ್ನ ಕಚ್ಚುವ ಗುಣವನ್ನು ಬಿಡಲಿಲ್ಲ. ಅದನ್ನು ಬದುಕಿಸುವ ಪ್ರಯತ್ನವನ್ನು ಋಷಿಯೂ ಬಿಡಲಿಲ್ಲ.

ದಡದಲ್ಲಿ ನಿಂತಿದ್ದ ಋಷಿ ಶಿಷ್ಯನು "ಸ್ವಾಮೀಜಿ! ಇದು ಚೇಳು, ವಿಷಜಂತು. ನೀವು ಪ್ರತಿಬಾರಿ ಅದನ್ನು ರಕ್ಷಿಸಲು ಪ್ರಯತ್ನಿಸಿದಾಗಲೂ ಅದು ನಿಮ್ಮನ್ನು ಕಚ್ಚುತ್ತದೆ. ಆದ್ದರಿಂದ ಅದಕ್ಕೆ ಒಳ್ಳೆಯದನ್ನು ಮಾಡಿ ಫಲವಿಲ್ಲ. ಅದನ್ನು ನದಿಯಲ್ಲೇ ಬಿಟ್ಟುಬಿಡಿ" ಎಂದ. ಅದಕ್ಕೆ ಋಷಿ, "ನೀನು ಹೇಳುತ್ತಿರುವುದು ಸರಿ. ಆದರೆ ಇದು ಧರ್ಮದ ಸ್ವರೂಪ. ಕಚ್ಚುವುದು ಚೇಳಿನ ಗುಣ. ಪ್ರೀತಿ ಮತ್ತು ಅನುಕಂಪ ತೋರಿಸುವುದು ಮಾನವೀಯ ಗುಣ" ಎಂದು ಹೇಳಿದರು.

ಪುಸ್ತಕ ಪರಿಚಯ

ರೂ. 400/-




## ಪುಸ್ತಕ: ಭಾರತ ಪಥ

**ಲೇಖಕರು** : ಎಸ್. ಜೈಶಂಕರ್
**ಕನ್ನಡಕ್ಕೆ ಅನುವಾದ** : ಬಿ.ಎಸ್.ಜಯಪ್ರಕಾಶ ನಾರಾಯಣ
**ಪ್ರಕಾಶಕರು** : ಅರವಿಂದ್ ಇಂಡಿಯಾ


ಕನ್ನಡದಲ್ಲಿ ಪ್ರಕಟವಾಗಿರುವ ಅಪರೂಪದ ಪುಸ್ತಕವಿದು. ಭಾರತದ ವಿದೇಶಾಂಗ ಸಚಿವರಾದ ಶ್ರೀ ಎಸ್. ಜೈಶಂಕರ್ ಈ ಕೃತಿಯ ಮೂಲ ಲೇಖಕರು. ದಿ ಇಂಡಿಯಾ ವೇ ನಲ್ಲಿ, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಭಾರತಕ್ಕಿರುವ ಜಾಗತಿಕ ಸವಾಲುಗಳನ್ನು ವಿಶ್ಲೇಷಿಸಿದ್ದಾರೆ ಮತ್ತು ಸಂಭವನೀಯ ನೀತಿ ಪ್ರತಿಕ್ರಿಯೆಗಳನ್ನು ವಿವರಿಸಿದ್ದಾರೆ. ಅವುಗಳ ಕುರಿತು ಅವರು ತಿಳಿಸುವಾಗ ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮತ್ತು ಅಂತರರಾಷ್ಟ್ರೀಯ ಜವಾಬ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಬಹಳ ಜಾಗೃತರಾಗಿ ಪ್ರಸ್ತುತಪಡಿಸಿದ್ದಾರೆ. ಭಾರತ ವಿಶ್ವ ವೇದಿಕೆಯಲ್ಲಿ ತನ್ನ ಸ್ಥಾನವನ್ನು ಮರಳಿ ಪಡೆಯಲು ಪ್ರಯತ್ನಿಸುವ ನಾಗರಿಕ ಶಕ್ತಿಗೆ ಸೂಕ್ತವಾದ ಚಿಂತನೆಯನ್ನು ಇತಿಹಾಸ ಮತ್ತು ಪರಂಪರೆಯಾಧಾರಿತವಾಗಿ ಪುಸ್ತಕ ರೂಪದಲ್ಲಿರಿಸಿದ್ದಾರೆ. ಈಗಾಗಲೇ ಸಾವರ್ಕರ್, ಶಿವಾಜಿ ಮೊದಲಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುವ ಬಿ. ಎಸ್. ಜಯಪ್ರಕಾಶ ನಾರಾಯಣ ಈ ಪುಸ್ತಕವನ್ನೂ ಸುಂದರವಾಗಿ ಸರಳವಾಗಿ ಕನ್ನಡಕ್ಕೆ ತಂದಿದ್ದಾರೆ. ಹೀಗೆ ವಿದೇಶಾಂಗ ವ್ಯವಹಾರದಲ್ಲಿ ಅಪಾರ ಅನುಭವ ಹೊಂದಿರುವ ಶ್ರೀ ಎಸ್. ಜೈಶಂಕರ್ ಅವರ ಭಾರತದ ವಿದೇಶಾಂಗ ನೀತಿಯ ಒಳಹೊರಗುಗಳನ್ನು ವಿವರಿಸುವ ಮಹತ್ವದ ಗ್ರಂಥವನ್ನು ಕನ್ನಡದಲ್ಲಿ ಓದುವ ಅವಕಾಶ ದೊರೆತಂತಾಗಿದೆ.

**ವಾಟ್ಸಪ್ : 07483681708, 6360581957**

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಹರಿಪ್ರಸಾದ್ ಈಶ್ವರಮಂಗಲ, ಪಂಚಮಿ ಬಾಕಿಲಪದವು

# ಒಂದು ಮತಕ್ಕಾಗಿ 40 ಕಿ.ಮೀ. ನಡೆದು ಮತಗಟ್ಟೆ ಸ್ಥಾಪಿಸಲಿರುವ ಅಧಿಕಾರಿಗಳು





ಮತದಾನ ಪ್ರತಿಯೊಬ್ಬ ನಾಗರಿಕನ ರಾಷ್ಟ್ರೀಯ ಕರ್ತವ್ಯ. ಸುಭದ್ರ ಸರ್ಕಾರದ ರಚನೆಗೆ ಕಾರಣೀಭೂತವಾಗಬಲ್ಲ ಮತ್ತು ಸದೃಢ ರಾಷ್ಟ್ರ ನಿರ್ಮಾಣಕ್ಕೆ ಸಹಕಾರಿಯಾಗಬಲ್ಲ ಶಕ್ತಿ ನಮ್ಮ ಮತದಾನಕ್ಕಿದೆ. ಪ್ರತಿ ಮತವೂ ರಾಷ್ಟ್ರದ ಏಳಿಗೆಗೆ ಅತ್ಯಗತ್ಯ ಎನ್ನುವುದು ಭಾರತದಲ್ಲಿ ಕೇವಲ ಭಾಷಣದ ಸರಕಾಗಿಲ್ಲ. ಪ್ರತಿ ಮತವೂ ಚಲಾವಣೆಯಾಗಬೇಕೆಂಬ ಉದ್ದೇಶದಿಂದ ಮತದಾರರಿಗೆ ವ್ಯವಸ್ಥೆಯನ್ನು ಮಾಡಿಕೊಡುವ ಪ್ರಾಮಾಣಿಕ ಕೆಲಸವನ್ನು ಚುನಾವಣಾ ಆಯೋಗ ಮಾಡುತ್ತಿದೆ. ಕಾಲಕ್ಕೆ ತಕ್ಕಂತೆ ಚುನಾವಣಾ ಪ್ರಕ್ರಿಯೆಯಲ್ಲಾದ ಮತದಾರ ಸ್ನೇಹಿ ಬದಲಾವಣೆಗಳೂ ಇದಕ್ಕೆ ಸಾಕ್ಷಿ.

ಮತದಾನದ ಮಹತ್ವವನ್ನು ತಿಳಿಸುವ ಒಂದು ಪ್ರೇರಣಾದಾಯಿ ಘಟನೆ ಇಲ್ಲಿದೆ. ಎಪ್ರಿಲ್ 19ರಂದು ಅರುಣಾಚಲ ಪ್ರದೇಶದಲ್ಲಿ ಲೋಕಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ನಡೆಯಲಿದೆ. ಇದರ ಹಿನ್ನೆಲೆಯಲ್ಲಿ ಏಪ್ರಿಲ್ 18ರಂದು, ಮತಗಟ್ಟೆ ಅಧಿಕಾರಿಗಳ ತಂಡವು ಅರುಣಾಚಲ ಪ್ರದೇಶದ ದೂರದ ಮೂಲೆಯಲ್ಲಿ ಮತಗಟ್ಟೆಯನ್ನು ಸ್ಥಾಪಿಸಲು ಸುಮಾರು 40 ಕಿಲೋಮೀಟರ್ ಕಾಲ್ನಡಿಗೆಯಲ್ಲಿ ಚಾರಣ ಮಾಡಲಿದೆ. ಮಾಲೋಗಮ್ ಗ್ರಾಮದ ಏಕೈಕ ಮತದಾರರ ಸಲುವಾಗಿ ಈ ಕಾರ್ಯ ಕೈಗೊಳ್ಳಲಿದೆ. 44 ವರ್ಷದ ಮಹಿಳೆ, ಸೋಕೆಲಾ ತಯಾಂಗ್ ಅವರು ಮತದಾನವನ್ನು ಈ ಮೂಲಕ ನಡೆಸಲಿದ್ದಾರೆ.

"ಮತದಾನ ಯಾವಾಗಲೂ ಸಂಖ್ಯೆಗಳ ಆಧಾರದಲ್ಲಿ ನಡೆಯುವುದಲ್ಲ; ಪ್ರತಿಯೊಬ್ಬ ನಾಗರಿಕನು ತನ್ನ ಹಕ್ಕನ್ನು ನಿಭಾಯಿಸಬೇಕು. ಸೋಕೆಲಾ ತಯಾಂಗ್ ಅವರ ಮತವು ಇದರಲ್ಲಿ ಸೇರಿದೆ ಮತ್ತು ಸಮಾನತೆಗೆ ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ" ಎಂದು ಮುಖ್ಯ ಚುನಾವಣಾಧಿಕಾರಿ ಪವನ್ ಕುಮಾರ್ ಸೇನ್ ಹೇಳಿದ್ದಾರೆ. ಚುನಾವಣಾ ಅಧಿಕಾರಿಗಳ ಪ್ರಕಾರ, ಮಾಲೋಗಮ್‌ನಲ್ಲಿ ಕೆಲವೇ ಕೆಲವು ಕುಟುಂಬಗಳು ವಾಸವಾಗಿದ್ದು, ತಯಾಂಗ್ ಹೊರತುಪಡಿಸಿ ಉಳಿದವರೆಲ್ಲರೂ ಇತರ ಮತಗಟ್ಟೆಗಳಲ್ಲಿ ನೋಂದಾಯಿತ ಮತದಾರರಾಗಿದ್ದಾರೆ. ಆದರೆ ಅವರು ಬೇರೆ ಮತಗಟ್ಟೆಗೆ ಸ್ಥಳಾಂತರಗೊಳ್ಳಲು ಸಿದ್ಧರಿಲ್ಲ.


ತಯಾಂಗ್ ಅವರು ಮತ ಚಲಾಯಿಸಲು, ಅಧಿಕಾರಿಗಳು, ಭದ್ರತಾ ಸಿಬ್ಬಂದಿ ಮತ್ತು ಪೋರ್ಟರ್‌ಗಳನ್ನು ಒಳಗೊಂಡಂತೆ ಚುನಾವಣಾ ತಂಡವು ಹಯುಲಿಯಾಂಗ್‌ನಿಂದ ಅನಿರೀಕ್ಷಿತ ಹವಾಮಾನದ ನಡುವೆ ನಿರಾಶ್ರಯ ಗುಡ್ಡಗಾಡು ಪ್ರದೇಶದ ಮೂಲಕ ಪ್ರಯಾಸಕರ ಪ್ರಯಾಣವನ್ನು ಪ್ರಾರಂಭಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮವು ಹಯುಲಿಯಾಂಗ್ ವಿಧಾನಸಭಾ ಕ್ಷೇತ್ರದಲ್ಲಿ ಮತ್ತು ಅರುಣಾಚಲ ಪೂರ್ವ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಬೋಸಿರಾಮ್ ಸಿರಾಮ್ ಮತ್ತು ಬಿಜೆಪಿಯ ತಾಪಿರ್ ಗಾವೊ ಇವರುಗಳ ನಡುವೆ ಸ್ಪರ್ಧೆ ನಡೆಯಲಿದೆ. "ಮತಗಟ್ಟೆ ತಂಡವು ಮತದಾನದ ದಿನದಂದು ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ಬೂತ್‌ನಲ್ಲಿ ಇರಬೇಕಾಗಬಹುದು ಏಕೆಂದರೆ ತಯಾಂಗ್ ಯಾವಾಗ ಮತ ಚಲಾಯಿಸಲು ಬರುತ್ತಾರೆ ಎಂಬುದು ನಮಗೆ ತಿಳಿದಿಲ್ಲ" ಎಂದು ಚುನಾವಣಾ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯ ಬಗ್ಗೆ ತಿಳಿಸಿರುತ್ತಾರೆ.

2014ರ ಚುನಾವಣೆಯಲ್ಲಿ ಮಾಲೋಗಮ್‌ನ ಮತಗಟ್ಟೆಯಲ್ಲಿ ಇಬ್ಬರು ಮತದಾರರಿದ್ದರು. ತಯಾಂಗ್ ಅವರ ವಿಚ್ಛೇದಿತ ಪತಿ ಜನೆಲುಮ್ ತಯಾಂಗ್ ಅವರೂ ಇದ್ದರು. ವಿಚ್ಛೇದನದ ಬಳಿಕ ಅವರು ತಮ್ಮ ಹೆಸರನ್ನು ಕ್ಷೇತ್ರದ ಮತ್ತೊಂದು ಬೂತ್‌ಗೆ ವರ್ಗಾಯಿಸಿದ್ದಾರೆ. ತಯಾಂಗ್ ಇದೇ ಕ್ಷೇತ್ರದಲ್ಲಿ ಉಳಿದಿದ್ದಾರೆ.

## ಸಾಲುದ್ದದ ಸುದ್ದಿಗಳು

### ಇ-ಗೇಮಿಂಗ್‌ನಲ್ಲಿ ಭಾರತ ಮಾರುಕಟ್ಟೆ 20% ಹೆಚ್ಚಳ



ಇ-ಗೇಮಿಂಗ್‌ನಲ್ಲಿ ಭಾರತ ಮಾರುಕಟ್ಟೆಯು ಭಾರೀ ಮುಂಚೂಣಿಯಲ್ಲಿದೆ. ಅದರಲ್ಲೂ FY 25ರ ವೇಳೆಗೆ ದಿಢೀರನೇ 20%ರಷ್ಟು ಬೆಳವಣಿಗೆ ಕಾಣಲಿದೆ ಎಂದು ವರದಿ ತಿಳಿಸಿದೆ. ಸುಮಾರು 231 ಶತಕೋಟಿಗೆ ಗೇಮಿಂಗ್ ವಲಯದ ಮೌಲ್ಯವನ್ನು ಹೆಚ್ಚಿಸುವ ನಿರೀಕ್ಷೆಯನ್ನು ಹೊಂದಿದೆ. 33 ಪ್ರತಿಶತದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರದಲ್ಲಿ (CAGR) ಬೆಳವಣಿಗೆ ಹೊಂದಲಿದ್ದು, FY27 ರ ಹೊತ್ತಿಗೆ ಪ್ರಭಾವಶಾಲಿಯಾಗಿ 25,300 ಕೋಟಿ ರೂ ತಲುಪಲಿದೆ ಎಂದು ವರದಿಯಲ್ಲಿ ತಿಳಿದುಬಂದಿದೆ. ಜಾಗತಿಕ ದೃಷ್ಟಿಕೋನದಿಂದ ಗೇಮಿಂಗ್ ಕ್ಷೇತ್ರದಲ್ಲಿ ಭಾರತದ ಪ್ರಾಬಲ್ಯವು ಗಗನಕ್ಕೇರಲಿದೆ. 2023 ರಲ್ಲಿ ದೇಶವು 9.5 ಶತಕೋಟಿ ಗೇಮಿಂಗ್ ಅಪ್ಲಿಕೇಶನ್ ಡೌನ್‌ಲೋಡ್‌ಗಳನ್ನು ದಾಖಲಿಸಿದೆ.

### 2000 ಮುಖಬೆಲೆಯ ಶೇ. 97.67 ನೋಟುಗಳು ಮರಳಿದೆ : ಆರ್‌ಬಿಐ




ರೂ. 2000 ಮುಖಬೆಲೆಯ ಬ್ಯಾಂಕ್ ನೋಟುಗಳಲ್ಲಿ ಸುಮಾರು 97.69 ಪ್ರತಿಶತ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದೆ ಮತ್ತು ರೂ. 8,202 ಕೋಟಿ ಮೌಲ್ಯದ ಈ ನೋಟುಗಳು ಇನ್ನೂ ಸಾರ್ವಜನಿಕರ ಬಳಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. ಮೇ 19, 2023 ರಂದು, ಆರ್‌ಬಿಐ ರೂ.2,000 ಮುಖಬೆಲೆಯ ಬ್ಯಾಂಕ್ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವುದಾಗಿ ಘೋಷಿಸಿತು. ರೂ. 2000 ನೋಟುಗಳನ್ನು ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದ ಮೇ 19, 2023 ರಂದು ವಹಿವಾಟಿನ ಮುಕ್ತಾಯದ ವೇಳೆಗೆ ರೂ. 3.56 ಲಕ್ಷ ಕೋಟಿಯಷ್ಟಿದ್ದ ರೂ. 2000 ನೋಟುಗಳ ಒಟ್ಟು ಮೌಲ್ಯವು ಮಾರ್ಚ್ 29, 2024ರ ವಹಿವಾಟಿನ ಮುಕ್ತಾಯದ ವೇಳೆಗೆ ರೂ. 8,202 ಕೋಟಿಗೆ ಕುಸಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿಕೆಯಲ್ಲಿ ತಿಳಿಸಿದೆ.

### 2023-24 ರಲ್ಲಿ ರೂ.21,083 ಕೋಟಿಗಳ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ ಭಾರತದ ರಕ್ಷಣಾ ರಫ್ತು




ಐತಿಹಾಸಿಕ ಬೆಳವಣಿಗೆಯೊಂದರಲ್ಲಿ, ಭಾರತದ ರಕ್ಷಣಾ ರಫ್ತು 2023-24ರ ಹಣಕಾಸು ವರ್ಷದಲ್ಲಿ ರೂ.21,083 ಕೋಟಿಗಳ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದು, ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ FY24 ರಲ್ಲಿ 32.5% ಬೆಳವಣಿಗೆಯಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ದಾಖಲೆಯ ಸಾಧನೆಯನ್ನು ಶ್ಲಾಘಿಸಿದ್ದಾರೆ.

### ದೂರ ಸಂಪರ್ಕ ಇಲಾಖೆ ಹೆಸರಿನಲ್ಲಿ ಬರುವ ದೂರವಾಣಿ ಕರೆಗಳ ಬಗ್ಗೆ ಇರಲಿ ಎಚ್ಚರ

ಇತ್ತೀಚಿನ ದಿನಗಳಲ್ಲಿ ಮೊಬೈಲ್‌ಗೆ ಸ್ಕ್ಯಾಮ್ ಕರೆಗಳು ಹೆಚ್ಚಾಗುತ್ತಿವೆ. ಹೀಗಾಗಿ ಇದರ ಬಗ್ಗೆ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು. ಇದೀಗ ದೂರ ಸಂಪರ್ಕ ಇಲಾಖೆ (DoT) ಹೆಸರಿನಲ್ಲಿ ಬರುತ್ತಿದ್ದ ದೂರವಾಣಿ ಕರೆಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಕೇಂದ್ರ ಸರ್ಕಾರ ನಿರ್ದೇಶನ ಹೊರಡಿಸಿದೆ. ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ತಮ್ಮ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕ ಕಡಿತಗೊಳಿಸುವಂತೆ ಬೆದರಿಕೆ ಹಾಕುವ ಬಗ್ಗೆ ಕರೆಗಳು ಬರುತ್ತಿರುವ ಬಗ್ಗೆ ವರದಿಯಾದ ಹಿನ್ನೆಲೆಯಲ್ಲಿ ಈ ನಿರ್ದೇಶನ ನೀಡಿದೆ. ವಿದೇಶಿ ಮೂಲದ ಮೊಬೈಲ್ ಸಂಖ್ಯೆಗಳಿಂದ ವಾಟ್ಸಪ್ ಕರೆಗಳು, ಸರ್ಕಾರಿ ಅಧಿಕಾರಿಗಳ ಸೋಗು ಹಾಕಿ ಎಚ್ಚರಿಕೆ ನೀಡುವುದು ಮತ್ತು ಜನರನ್ನು ವಂಚಿಸುವ ಬಗ್ಗೆ ದೂರ ಸಂಪರ್ಕ ಇಲಾಖೆ ಸಲಹೆಯನ್ನು ಬಿಡುಗಡೆ ಮಾಡಿದೆ.

### ವಿಶ್ವಸಂಸ್ಥೆಯ ಪ್ರಧಾನ ಕಛೇರಿಯಲ್ಲಿ ಅಕ್ಷಯ ಪಾತ್ರೆಯ ಮೈಲಿಗಲ್ಲಿನ ಸಂಭ್ರಮ

ಅಕ್ಷಯ ಪಾತ್ರ ಫೌಂಡೇಶನ್ ನಾಲ್ಕು ಶತಕೋಟಿ ಊಟವನ್ನು ಪೂರೈಸಿದ ಐತಿಹಾಸಿಕ ಮೈಲಿಗಲ್ಲನ್ನು ವಿಶ್ವಸಂಸ್ಥೆಯ ಪ್ರಧಾನ ಕಛೇರಿಯಲ್ಲಿ ಆಚರಿಸಲಾಯಿತು. ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಭಾರತದ ಪೂರ್ವಭಾವಿ ಕ್ರಮಗಳನ್ನು ಮತ್ತು ಇತರ ರಾಷ್ಟ್ರಗಳಿಗೂ ಅದನ್ನು ಪರಿಣಾಮಕಾರಿಯಾಗಿ ವಿಸ್ತರಿಸಿದಕ್ಕಾಗಿ ಇಲ್ಲಿ ಶ್ಲಾಘನೆಗಳನ್ನು ವ್ಯಕ್ತಪಡಿಸಲಾಯಿತು. 'ಆಹಾರ ಭದ್ರತೆಯಲ್ಲಿನ ಸಾಧನೆಗಳು: ಸುಸ್ಥಿರ ಅಭಿವೃದ್ಧಿ ಗುರಿಗಳತ್ತ ಭಾರತದ ದಾಪುಗಾಲುಗಳು' ಎಂಬ ಶೀರ್ಷಿಕೆಯೊಂದಿಗೆ ಇದನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮ ಆಹಾರ ಭದ್ರತೆ ಮತ್ತು ಪೋಷಣೆಯಲ್ಲಿನ ದೇಶದ ನವೀನ ಕಾರ್ಯತಂತ್ರಗಳು, ನೀತಿಗಳು ಮತ್ತು ಸಾಧನೆಗಳನ್ನು ಪ್ರದರ್ಶಿಸಿದೆ ಮತ್ತು ಅದರ ಶೂನ್ಯ ಹಸಿವಿನ ಗುರಿಯನ್ನು ಪ್ರಶಂಸಿಸಿದೆ.



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th APRIL 2024

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 15-04-2024



## ಆರ್‌ಎಸ್‌ಎಸ್ ಹೆಸರು ದುರ್ಬಳಕೆ: ದೂರು ದಾಖಲು



**ನಾಗಪುರ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರನ್ನು ದುರುಪಯೋಗಗೊಳಿಸಿದ್ದಕ್ಕಾಗಿ ಶ್ರೀ ಜನಾರ್ದನ್ ಮೂನ್ ಅವರ ವಿರುದ್ಧ ಆರ್‌ಎಸ್‌ಎಸ್ ನಾಗಪುರ ಮಹಾನಗರದ ಕಾರ್ಯಕರ್ತರಿಂದ ಐಪಿಸಿ ಸೆಕ್ಷನ್ 416, 419, 505ರ ಅಡಿಯಲ್ಲಿ ದೂರು ದಾಖಲಿಸಲಾಗಿದೆ. ಮಾರ್ಚ್ 26ರಂದು ಐವರು ವ್ಯಕ್ತಿಗಳು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರಿನಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿದ್ದರು. ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೋ ವೈರಲ್ ಆಗಿತ್ತು. ಮಾರ್ಚ್ 29ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಗಪುರದ ಕಾರ್ಯಕರ್ತರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರನ್ನು ದುರುಪಯೋಗಗೊಳಿಸಲಾಗುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದವರ ವಿರುದ್ಧ ದೂರು ನೀಡಿದ್ದಾರೆ.

## UP ಬೋರ್ಡ್ ಆಫ್ ಮದರಸಾ ಎಜುಕೇಶನ್ ಕಾಯ್ದೆ 2004 ಅಸಂವಿಧಾನಿಕ

ನವದೆಹಲಿ: ಯುಪಿ ಬೋರ್ಡ್ ಆಫ್ ಮದರಸಾ ಎಜುಕೇಶನ್ ಕಾಯ್ದೆ 2004 ಅನ್ನು ಅಸಂವಿಧಾನಿಕ ಎಂದು ಅಲಹಾಬಾದ್ ಹೈಕೋರ್ಟ್ ಘೋಷಿಸಿದೆ. ಈ ಕಾಯ್ದೆಯು ಜಾತ್ಯಾತೀತತೆಯ ತತ್ವವನ್ನು ಉಲ್ಲಂಘಿಸುತ್ತದೆ ಎಂದು ಅಲಹಾಬಾದ್ ಹೈಕೋರ್ಟ್ ತಿಳಿಸಿದೆ. ಕಾಯ್ದೆಯಡಿ ಸಂತ್ರಸ್ತರಾದ ವಿದ್ಯಾರ್ಥಿಗಳನ್ನು ನಿಯಮಿತ ಶಿಕ್ಷಣ ವ್ಯವಸ್ಥೆಗೆ ಸಂಯೋಜಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿದೆ. ಅಂಶುಮಾನ್ ಸಿಂಗ್ ರಾಥೋಡ್ ಎಂಬ ವ್ಯಕ್ತಿಯು ಕಾಯ್ದೆಯ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ಬಳಿಕ ಅಲಹಬಾದ್ ಹೈಕೋರ್ಟ್ ಲಕ್ನೋ ವಿಭಾಗದ ನ್ಯಾಯಮೂರ್ತಿಗಳಾದ ವಿವೇಕ್ ಚೌಧರಿ ಮತ್ತು ಸುಭಾಷ್ ವಿದ್ಯಾರ್ಥಿ ಈ ತೀರ್ಪು ನೀಡಿದ್ದಾರೆ.

## ಭಾರತೀಯ ನೌಕಾಪಡೆಯಿಂದ 23 ಪಾಕಿಸ್ಥಾನಿ ಪ್ರಜೆಗಳ ರಕ್ಷಣೆ



ಭಾರತೀಯ ನೌಕಪಡೆಯು ಅರಬ್ಬಿ ಸಮುದ್ರದಲ್ಲಿ ಸತತ 12 ಗಂಟೆಗಳ ಕಾಲ ಕಾರ್ಯಚರಣೆ ನಡೆಸಿ 23 ಪಾಕಿಸ್ಥಾನಿ ಪ್ರಜೆಗಳನ್ನು ಸೊಮಾಲಿಯಾ ಕಡಲಗಳ್ಳರಿಂದ ರಕ್ಷಿಸಿದೆ. ಭಾರತೀಯ ನೌಕಾಪಡೆಯು ಯುದ್ಧತಂತ್ರದ ಪರಿಣತಿ ಮತ್ತು ಕಾರ್ಯತಂತ್ರದ ಸಮನ್ವಯವನ್ನು ಬಳಸಿಕೊಂಡು ಕಡಲ್ಗಳ್ಳರೊಂದಿಗೆ ಮಾತುಕತೆಗಳನ್ನು ಪ್ರಾರಂಭಿಸಿದವು, ರಕ್ತಪಾತವಿಲ್ಲದೆ ಶರಣಾಗುವಂತೆ ಒತ್ತಾಯಿಸಿದವು. ಬಳಿಕ ಕಡಲ್ಗಳ್ಳರು ನೌಕಾ ಪಡೆಗೆ ಶರಣಾಗತರಾಗಿ ಹಡಗು ಮತ್ತು ಅದರಲ್ಲಿದ್ದವರನ್ನು ಬಿಡುಗಡೆ ಮಾಡಿದ್ದಾರೆ.

## ಆಂತರಿಕ ವಿಷಯಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಭಾರತಕ್ಕಿದೆ: ಉಪ ರಾಷ್ಟ್ರಪತಿ



ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಬಂಧನದ ಕುರಿತು ಅಮೆರಿಕ, ಜರ್ಮನಿ ಮತ್ತು ವಿಶ್ವಸಂಸ್ಥೆಯ ಇತ್ತೀಚಿನ ಪ್ರತಿಕ್ರಿಯೆಗಳಿಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ಪ್ರತ್ಯುತ್ತರ ನೀಡಿದ್ದು, ದೃಢವಾದ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುವ ಸಾರ್ವಭೌಮ ರಾಷ್ಟ್ರವಾಗಿ ಭಾರತದ ನಿಲುವನ್ನು ದೃಢಪಡಿಸಿದ್ದಾರೆ. ನವದೆಹಲಿಯಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ 70ನೇ ಸಂಸ್ಥಾಪಕರ ದಿನಾಚರಣೆಯಲ್ಲಿ ಭಾಗವಹಿಸಿದ್ದವರನ್ನು ಉದ್ದೇಶಿಸಿ ಮಾತನಾಡಿದ ಧನಕರ್, ಭಾರತಕ್ಕೆ ಕಾನೂನಿನ ನಿಯಮದ ಕುರಿತು ಯಾವುದೇ ದೇಶದಿಂದ ಪಾಠಗಳ ಅಗತ್ಯವಿಲ್ಲ ಎಂದಿದ್ದಾರೆ. ಯುರೋಪಿನ ದೇಶಗಳು, ಅಭಿವೃದ್ಧಿ ಹೊಂದಿದ ಪ್ರಜಾಪ್ರಭುತ್ವಗಳು ತಮ್ಮ ಸ್ವಂತ ವ್ಯವಹಾರಗಳನ್ನು ಮಾತ್ರ ನೋಡಿಕೊಳ್ಳಬೇಕು ಎಂದು ಧನಕರ್ ಹೇಳಿದರು. ತನ್ನ ಆಂತರಿಕ ವಿಷಯಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಭಾರತದ ಸಾಮರ್ಥ್ಯವನ್ನು ಪ್ರತಿಪಾದಿಸಿದರು.

## ಜ್ಞಾನವಾಪಿ ಕುರಿತ ಆದೇಶಕ್ಕೆ ತಡೆ ಹೇರಲು ಸುಪ್ರೀಂಕೋರ್ಟ್ ನಕಾರ



ವಾರಣಾಸಿಯ ಜ್ಞಾನವಾಪಿಯ ದಕ್ಷಿಣ ನೆಲಮಾಳಿಗೆಯಲ್ಲಿ ಪೂಜೆ ನಡೆಸಲು ಹಿಂದೂಗಳಿಗೆ ನೀಡಿದ ಅನುಮತಿಗೆ ತಡೆ ನೀಡಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿದೆ. ಎರಡೂ ಸಮುದಾಯಗಳು ಜ್ಞಾನವಾಪಿ ಆವರಣದಲ್ಲಿ ಧಾರ್ಮಿಕ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕಕ್ಷಿದಾರರಿಗೆ ಆದೇಶಿಸಿದೆ. ತೆಹ್ಖಾನಾದಲ್ಲಿ ಪೂಜೆಗೆ ಅನುಮತಿ ನೀಡಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಮಸೀದಿ ಸಮಿತಿ ಮತ್ತು ಮುಸ್ಲಿಂ ಪಕ್ಷಗಳು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ, ಎರಡೂ ಸಮುದಾಯಗಳು ಪೂಜೆಗಳನ್ನು ಸಲ್ಲಿಸಲು ಸಾಧ್ಯವಾಗುವಂತೆ ಯಥಾಸ್ಥಿತಿ ಕಾಯ್ದುಕೊಳ್ಳುವುದು ಸೂಕ್ತವಾಗಿದೆ. ಪ್ರಾರ್ಥನೆ ಸಲ್ಲಿಕೆಯಲ್ಲಿ ಎರಡೂ ಪಕ್ಷಗಳಿಂದ ತೊಂದರೆಯಾಗಬಾರದು. ಹಿಂದೂಗಳು ದಕ್ಷಿಣದಿಂದ ಪ್ರವೇಶಿಸಿ ನೆಲಮಾಳಿಗೆಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ ಮತ್ತು ಮುಸ್ಲಿಮರು ಉತ್ತರ ಭಾಗದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರಕರಣವು ಅಂತಿಮವಾಗಿ ತೀರ್ಮಾನವಾಗುವವರೆಗೆ ಈ ವ್ಯವಸ್ಥೆ ಮುಂದುವರಿಯುತ್ತದೆ ಎಂದು ನ್ಯಾಯಾಲಯ ಇದೇ ಸಮಯದಲ್ಲಿ ಹೇಳಿತು.

## ಅಮೆರಿಕದಲ್ಲಿ ರಾಮ ಯಾತ್ರೆ



ಅಮೆರಿಕದ ಚಿಕಾಗೋದಿಂದ ಮಾ.25ರಂದು ರಾಮ ಮಂದಿರ ರಥಯಾತ್ರೆ ಆರಂಭವಾಗಿದ್ದು 48 ಪ್ರಾಂತ್ಯಗಳಲ್ಲಿನ 851 ದೇವಾಲಯಗಳನ್ನು ಈ ರಥಯಾತ್ರೆ ಸಂದರ್ಶಿಸಲಿದೆ. ಮುಂದಿನ 60 ದಿನಗಳಲ್ಲಿ 8 ಸಾವಿರ ಮೈಲಿಗಳಿಗೂ ಅಧಿಕ ದೂರ ಸಂಚರಿಸಲಿದೆ. ಅಯೋಧ್ಯೆಯ ಶ್ರೀರಾಮ ಮಂದಿರದ ಪ್ರಸಾದ ಮತ್ತು ಬಾಲರಾಮನ ಪ್ರಾಣ ಪ್ರತಿಷ್ಠೆ ಸಂದರ್ಭ ಪೂಜಿತ ಕಲಶ, ಅಕ್ಷತೆಗಳೂ ರಥದಲ್ಲಿರುವುದು ಎಂದು ರಥಯಾತ್ರೆಯ ಆಯೋಜಕರಾದ ಅಮೆರಿಕದ ವಿಶ್ವ ಹಿಂದೂ ಪರಿಷತ್ ತಿಳಿಸಿದೆ.

ಕೆನಡಾದಲ್ಲಿ ಅಲ್ಲಿನ ವಿಶ್ವ ಹಿಂದೂ ಪರಿಷತ್ ರಥಯಾತ್ರೆ ಆಯೋಜಿಸುವುದು. ಕೆನಡಾದ 150 ದೇವಾಲಯಗಳನ್ನು ರಥಯಾತ್ರೆ ಸಂದರ್ಶಿಸುವುದು. ಹಿಂದು ಧರ್ಮದ ಬಗ್ಗೆ ಜನಜಾಗೃತಿ ಮೂಡಿಸುವುದು ರಥಯಾತ್ರೆಯ ಧ್ಯೇಯ ಎಂದು ಅಮೆರಿಕದ ಎಲ್ಲಾ ದೇವಾಲಯಗಳಿಗೆ ಸರ್ವೋಚ್ಚ ಸಂಸ್ಥೆಯಾಗಿರುವ ಹಿಂದು ಮಂದಿರ ಎಂಪವರ್‌ಮೆಂಟ್ ಕೌನ್ಸಿಲ್ (ಎಚ್‌ಎಂಇಸಿ) ತಿಳಿಸಿದೆ.

## ಕೋಟಿ ಗೀತಾ ಲೇಖನ ಯಜ್ಞಕ್ಕೆ ಪ್ರಧಾನಿ ಶ್ಲಾಘನೆ



ಉಡುಪಿಯ ಅಷ್ಟಮಠಗಳಲ್ಲೊಂದಾದ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ನಾಲ್ಕನೇ ಪರ್ಯಾಯ ಅವಧಿಯ ಬಹುಮುಖ್ಯ ಯೋಜನೆಗಳಲ್ಲಿ ಒಂದಾದ ಮಹತ್ವಾಕಾಂಕ್ಷೆಯ ಕೋಟಿ ಗೀತಾ ಲೇಖನ ಯಜ್ಞ ಅಭಿಯಾನ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಜ್ಞಾನ ಮತ್ತು ಅರಿವಿನ ಚಿಲುಮೆಯಾದ ಶ್ರೀಮದ್ಭಗವದ್ಗೀತೆಯು ಜನರ ಬದುಕಿಗೆ ಮಾರ್ಗದರ್ಶಕವಾಗಿದ್ದು ಜಗದ ಜನರ ಸೇವೆ ಹೇಗೆ ಮಾಡಬೇಕೆನ್ನುವ ಪಾಠ ಅದರಲ್ಲಿ ಅಂತರ್ಗತವಾಗಿದೆ. ಸ್ವಾರ್ಥ ರಹಿತ ಸೇವೆ ಇಂದಿನ ಅಗತ್ಯ. ಕರ್ತವ್ಯ, ಸೇವೆಯ ಮೂಲಕ ಮನಶ್ಶಾಂತಿ ಗಳಿಸಲು, ಬದುಕಿನಲ್ಲಿ ಸಾರ್ಥಕತೆ ಹೊಂದಲು ಭಗವದ್ಗೀತೆ ಪ್ರೇರಣೆ. ಗೀತೆಯ ಶ್ಲೋಕಗಳ ಬರಹ, ಓದುವಿಕೆ, ಮನನ ಮಾಡುವುದರಿಂದ ಮನಸ್ಸು, ಪ್ರಜ್ಞೆ ತೆರೆದುಕೊಳ್ಳುವ ಮೂಲಕ ದಿವ್ಯ ಶಕ್ತಿಯ ಸಂಪರ್ಕ ಸಾಧ್ಯ. ಪರ್ಯಾಯ ಪುತ್ತಿಗೆ ಶ್ರೀಗಳ ಕೋಟಿ ಗೀತಾ ಲೇಖನ ಯಜ್ಞ ಅಭಿಯಾನವು ಶ್ರೀಕೃಷ್ಣನಿಗೆ ಅರ್ಪಿಸುವ ಮೂಲಕ ಸಿಗುವ ಅನುಗ್ರಹವು ಮಾನವೀಯ ಸಮಾಜ, ಜಗತ್ತಿನ ಶಾಂತಿ, ನೆಮ್ಮದಿಗೆ ವರವಾಗಲಿ ಎಂದು ಪ್ರಧಾನಿ ಪತ್ರದ ಮೂಲಕ ಹಾರೈಸಿದ್ದಾರೆ.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 8722552497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.